ಸದರೀ ದರಖಾಸ್ತುದಾರರಾದ ಮೆ|| ಮಹಮ್ಮದಲ್ಲಿಯವರ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ್‌ಖಾದರ್‌ಸಾಹೇಬರ ರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಏಪ್ರೆಲ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ಸಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಹಾಸನದ ಡಿಸ್ಟ್ರಿಕ್ಟ್.

1887—88ನೇ ಮುಂದಿನ ಸರ್ಕಾರಿ ಸಾಲಿನಲ್ಲಿ ಈಕೆಳಗೆ ನಮೂದು ಮಾಡಿರುವ ಜಂಗೆಲ್‌ಗಳಲ್ಲಿ ಹಾಲಿ ಕತರಾಯಿಸಿ ಬಿದ್ದಿರುವ 10,000 ಸಲಅಡಿ ಚೌಬೀನೆಯನ್ನು ಗಾಡಿ ಹೋಗುವ ಸ್ಥಳಕ್ಕೆ ಯೆಳದು ಅವಶ್ಯಕವಾದರೆ ಕುಯಿದು ಹಾಸನದ ಡಿಪೋಕ್ಕೆ ಹೇರುವದಕ್ಕೆ ಇದರ ಮೂಲಕ ದರಖಾಸ್ತುಗಳನ್ನು ಅಪೇಕ್ಷಿಸಲ್ಪಡುತ್ತವೆ.

ಕೆಂಪುಹೊಳೆ ಫಾಟಿ ಫಾರೆಸ್ಟ್.	ಮಂಜರಾಬಾದ್ ತಾಲ್ಲೂಕು.
ಕಬ್ಬಿನಾಲೆ ಡಿಟೋ	

2. ದರಖಾಸ್ತುಗಳು ನಾಟಾಗಳನ್ನು ಯೆಳದು ಹಾಸನದಲ್ಲಿರುವ ಡಿಪೋಕ್ಕೆ ಹೇರುವ ಬಗ್ಯೆ ದರಖಾಸ್ತು ಯೆಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ನಗದಾಗಿಯಾಗಲಿ, ಕರೆನ್ಸಿ ನೋಟಿನ ಮೂಲಕವಾಗಿಯಾಗಲಿ, ದರಖಾಸ್ತಿನೊಡನೆ 200 ರೂಪಾಯಿಗಳು ಕಳುಹಿಸಲ್ಪಟ್ಟ ಹೊರ್ತು ಅನ್ಯಥಾ ಯಾವ ದರಖಾಸ್ತು ಅಂಗೀಕರಿಸಲ್ಪಡಲಾರದು.

4. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತುದಾರನು ಡಿಪೋಕ್ಕೆ ತಲಪಿಸಿ ಡಿಪೋ ಇಂಛಾರ್ಜ್ ನವುಕರನಿಂದ ತೆಗದುಕೊಳ್ಳಲ್ಪಟ್ಟ ಚೌಬೀನೆಗೆ ಕುಯಿದ ಮತ್ತು ಯೆಳದ ನಾಟಾಗಳಿಗೆ ಪ್ರತಿ ಸಲಅಡಿ 1ಕ್ಕೆ ಖಾಯಿಷ್ ಮಾಡುವ ಕಮ್ಮೀ ದರವನ್ನು ಪ್ರತ್ಯೇಕ ಪ್ರತ್ಯೇಕವಾಗಿ ನಮೂದಿಸತಕ್ಕದ್ದು.

5. ಡೆಪ್ಯುಟಿ ಕಮ್ಮಿಷನರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವತಂತ್ರ್ಯವನ್ನು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ. ಮತ್ತು ಹಾಂಗೆ ತಿರಸ್ಕರಿಸುವ ಬಗ್ಯೆ ಅವರು ಯಾವ ಕಾರಣವು ತಿಳಿಸಬೇಕಾದ್ದಿಲ್ಲವು.

6. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ವಂದು ವಾರದ ವಳಗಾಗಿ ತಕ್ಕ ಛಾಪಾ ಕಾಗದದಲ್ಲಿ ಕಂಟ್ರಾಕ್ಟು ಮುಚ್ಚಳಿಕೆಯನ್ನ ಬರದುಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕ್ರಮೇಣ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದು ಮಾಡಲ್ಪಟ್ಟ ದರಖಾಸ್ತುಗಳು ಇವರಡೀ ರುಜು ಮಾಡಿರುವವರಿಂದ ಸ್ಯ 1887ನೇ ಇಸವಿ ಮೇ ತಾರೀಖು 31ರ ವರಿಗೆ ತೆಗದುಕೊಳ್ಳಲ್ಪಡುವದು.

9. ಕಂಟ್ರಾಕ್ಟು ಷರತ್ತುಗಳನ್ನು ಕುರಿತು ಯಾ ಇತರ ವಿಷಯಕವಾದ ವಿಶೇಷ ತಪಸೀಲ್‌ಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಬೇಷನರ್, ಹಾಸನ ರೇಂಜ್.